(ರೂ.ಲಕ್ಷಗಳಲ್ಲಿ)

ಕ್ರ. ಸಂ	ವರ್ಷ	ಬಿಡುಗಡೆ ಆದ ಅನುದಾನ	ಖರ್ಚಾದ ಅನುದಾನ
1	2012–13	52.61	24.61
2	2013–14	43.84	33.60
3	2014–15	26.21	0.00**

** ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿದ್ದು ಯಾವುದೇ ವೆಚ್ಚ ಇರುವುದಿಲ್ಲ

ಇ) ಇಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಈ) ಜಿಲ್ಲಾ ಪಂಚಾಯತಿ ಕೆರೆಗಳ ಪುನರ್‌ಸ್ಥಿತಿ ಮತ್ತು ಪುನಶ್ಚೇತನ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ–2702ರಡಿ ಹಾಲಿ ಶಿಥಿಲಾವಸ್ಥೆಯಲ್ಲಿರುವ ಕೆರೆಗಳನ್ನು ದುರಸ್ತಿ / ಅಭಿವೃದ್ಧಿ ಮಾಡಬೇಕಾಗಿದ್ದು, ಪ್ರಸ್ತುತ ಸಾಲಿನಲ್ಲಿ ಈ ಕಾರ್ಯಕ್ರಮದಡಿ ಕಲಬುರಗಿ ಜಿಲ್ಲೆಗೆ ಒಟ್ಟಾರೆ ರೂ. 299.92 ಲಕ್ಷಗಳನ್ನು ಹಾಗೂ ತಾಲ್ಲೂಕಿಗೆ ರೂ. 54.42 ಲಕ್ಷಗಳನ್ನು ಒದಗಿಸಲಾಗಿರುತ್ತದೆ.

ಅದರಂತೆ, ಜಿಲ್ಲಾ ಪಂಚಾಯತಿಯಲ್ಲಿ ಕ್ರಿಯಾ ಯೋಜನೆ ರೂಪಿಸಿ, ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು

2443(2892); ಡಾ॥ ಅಜಯ ಸಿಂಗ್ (ಜೇವರ್ಗಿ)

ಅ) ಜೇವರ್ಗಿ ಮತಕ್ಷೇತ್ರದ ಜೇವರ್ಗಿ ಪಟ್ಟಣದಲ್ಲಿ ಘೋಷಿತ ಕೊಳಗೇರಿಗಳ ಸಂಖ್ಯೆ ಎಷ್ಟು;

ಆ) ಕಳೆದ ಮೂರು ವರ್ಷಗಳಲ್ಲಿ ಈ ಕೊಳಗೇರಿಗಳಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಇ) ಈಗಾಗಲೇ ಬಿಡುಗಡೆಯಾದ ಹಣದಲ್ಲಿ ಯಾವ ಯಾವ ಕೆಲಸಗಳು ಯಾವ ಹಂತದಲ್ಲಿವೆ?

ಡಾ॥ ಎಂ.ಹೆಚ್. ಅಂಬರೀಶ್ (ವಸತಿ ಸಚಿವರು)

ಅ) ಜೇವರ್ಗಿ ಮತಕ್ಷೇತ್ರದ ಜೇವರ್ಗಿ ಪಟ್ಟಣದಲ್ಲಿ ಒಟ್ಟು 9 ಘೋಷಿತ ಕೊಳಚೆ ಪ್ರದೇಶಗಳಿರುತ್ತವೆ.

ಆ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿವತಿಯಿಂದ ಜೇವರ್ಗಿ ಮತಕ್ಷೇತ್ರದಲ್ಲಿರುವ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ವಿವರ ಈ ಕೆಳಗಿನಂತಿದೆ.

ಕ್ರ.ಸಂ	ವರ್ಷ	ಕೊಳಚೆ ಪ್ರದೇಶದ ಹೆಸರು	ಕಾಮಗಾರಿಯ ವಿವರ	ಬಿಡುಗಡೆ ಮಾಡಿದ ಮೊತ್ತ (ರೂ.ಲಕ್ಷ)	ಷರಾ
1	2012–13	ವಿದ್ಯಾನಗರ	ಸಿಸಿ ರಸ್ತೆ,	15.00	ಕಾಮಗಾರಿ ಪೂರ್ಣಗೊಂಡಿದೆ
2		ಖಾಜಾ ಕಾಲೋನಿ	ಸಿ.ಸಿ. ರಸ್ತೆ	14.66	ಕಾಮಗಾರಿ ಪೂರ್ಣಗೊಂಡಿದೆ
3	2013–14	ಇಂದಿರಾ ನಗರ	ಸಿ.ಸಿ. ರಸ್ತೆ	31.46	ಕಾಮಗಾರಿ ಪೂರ್ಣಗೊಂಡಿದೆ
4	2014–15	ಖಾಜಾ	ಸಿಸಿ ರಸ್ತೆ, ಚರಂಡಿ, ಕಿರು ನೀರು ಸರಬರಾಜು	---	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ
		ಒಟ್ಟು		61.12	

ಇ) 2012–13 ಮತ್ತು 2013–14ನೇ ಸಾಲಿನಲ್ಲಿ ಒದಗಿಸಿರುವ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಂಡು, ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. 2014–15ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ರೂ. 20.00 ಲಕ್ಷ ಅನುದಾನ ನಿಗಧಿಪಡಿಸಿದ್ದು, ಕಾಮಗಾರಿ ಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.